ಸಂಪುಟ : 40 ಸಂಚಿಕೆ 137 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 13 ಜೂನ್ 2017 ಮಂಗಳವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ವೆಸ್ಟ್ಇಂಡೀಸ್ ಸರಣಿಗೂ ಕುಂಬ್ಳೆ ಕೋಚ್ : ಸಿಒಎ ಮುಖ್ಯಸ್ಥ ವಿನೋದ್‌ರಾಯ್

ವಿವರ : ಪುಟ 5

NEET
National Eligibility Cum Entrance Test

2017ರ ನೀಟ್ ಫಲಿತಾಂಶ ಪ್ರಕಟಿಸಲು ಸಿಬಿಎಸ್‌ಇಗೆ ಸುಪ್ರೀಂಕೋರ್ಟ್ ಆದೇಶ

ವಿವರ : ಪುಟ 10

ಮಾಧ್ಯಮಗಳ ವಿರುದ್ಧ ಕೇಂದ್ರ ಸರ್ಕಾರದ ದಮನಕಾರಿ ನೀತಿ : ರಾಹುಲ್‌ಗಾಂಧಿ ಆರೋಪ

ವಿವರ : ಪುಟ 5



₹55 Discount Per Gram
Gold 916 ₹ 2730/-
Silver ₹ 40200/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

## ಮಕ್ಕಳಿಂದ ದುಡಿಸಿಕೊಳ್ಳುವುದು ಅಪರಾಧ

### ಬಾಲ ಕಾರ್ಮಿಕ ವಿರೋಧಿ ಕಾರ್ಯಕ್ರಮದಲ್ಲಿ ನ್ಯಾಯಾಧೀಶ ಬಾದಾಮಿಕರ್ ಎಚ್ಚರಿಕೆ

**ತುಮಕೂರು**

ಅಪಾಯಕಾರಿ ಉದ್ಯಮ ಮತ್ತು ಕಾರ್ಖಾನೆಗಳಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವುದು ಕಾನೂನು ಪ್ರಕಾರ ಅಪರಾಧವಾಗಿದೆ. ಮಕ್ಕಳು ಶಿಕ್ಷಣ ಕಲಿಯುವುದು ಅವರ ಮೂಲಭೂತ ಹಕ್ಕಾಗಿದ್ದು, ಅದನ್ನು ಯಾರೂ ಕಸಿದುಕೊಳ್ಳಬಾರದು ಎಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರಾದ ರಾಜೇಂದ್ರ ಬಾದಾಮಿಕರ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ವಕೀಲರ ಸಂಘ, ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ತುಮಕೂರು ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ಬಾಲ ಕಾರ್ಮಿಕರ ವಿರೋಧಿ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜಾಗೃತಿ ಜಾಥಾವನ್ನು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಉದ್ಘಾಟಿಸಿ ಮಾತನಾಡುತ್ತಿದ್ದರು. ಮಕ್ಕಳು ಶಾಲೆಗೆ ಹೋಗುವುದು ಅವರ ಹಕ್ಕು. ಯಾವುದೇ ಕಾರಣಕ್ಕೂ ದುಡಿಮೆಗೆ ಕಳುಹಿಸಬಾರದು. ಮಕ್ಕಳ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಮಕ್ಕಳ ಹಕ್ಕುಗಳ ರಕ್ಷಣೆ ವಿಷಯದಲ್ಲಿ ಪ್ರತಿಯೊಂದು ಇಲಾಖೆಗಳು ಪರಸ್ಪರ ಸಹಕಾರ ಮನೋಭಾವದಿಂದ ಕಾರ್ಯನಿರ್ವಹಿಸ ಬೇಕು. ಆಗ ಮಾತ್ರ ಈ ಆಚರಣೆಗಳಿಗೆ ಅರ್ಥ ಬರುತ್ತದೆ. ಕೇವಲ ಒಂದು ದಿನದ ಆಚರಣೆಗೆ ಇದು ಸೀಮಿತವಾಗಬಾರದು ಎಂದರು.

> **14 ವರ್ಷದೊಳಗಿನ ಬಾಲ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವವರು ಯಾರೇ ಆಗಿದ್ದರೂ ಅಂತಹವರಿಗೆ ರೂ. 20 ಸಾವಿರದಿಂದ 50 ಸಾವಿರಗಳವರೆಗೆ ಜುಲ್ಮಾನೆ ವಿಧಿಸುವ ಹಾಗೂ 6 ತಿಂಗಳಿಂದ 3 ವರ್ಷದವರೆಗೆ ಸಜೆ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಇದೆಲ್ಲಕ್ಕಿಂತ ಮಿಗಿಲಾಗಿ ಮಾನವೀಯತೆ ಹೊಂದಿರುವವರು ಯಾರೇ ಆಗಲಿ ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳಬಾರದು.**
> **-ಬಿ.ಎಲ್.ಜಿನರಾಳ್ಕರ್**



ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ದಿನಾಚರಣೆಯನ್ನು ನ್ಯಾಯಾಧೀಶ ಬಿ.ಎಲ್. ಜಿನರಾಳ್ಕರ್ ಉದ್ಘಾಟಿಸಿದರು. ಜಿ.ಪಂ.ಸಿ.ಇ.ಓ ಶಾಂತಾರಾಮ್, ಕಾರ್ಮಿಕಾಧಿಕಾರಿ ವರಲಕ್ಷ್ಮಿ, ನಂಜೇಗೌಡ, ಕೆ.ಹೆಚ್.ಹರಿಕುಮಾರ್, ರವಿಕುಮಾರ್ ಮುಂತಾದವರಿದ್ದರು.

ನಂತರ ನಗರದ ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಆಯೋಜಿಸಿದ್ದ ಬಾಲ ಕಾರ್ಮಿಕ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಎಲ್.ಜಿನರಾಳ್ಕರ್ ಅವರು ಬಾಲ ಕಾರ್ಮಿಕ ಪಿಡುಗು ಜಗತ್ತಿನ ಅನೇಕ ಕಡೆ ಇದೆ. ಇದನ್ನು ನಿಯಂತ್ರಿಸಲು ವಿಶ್ವ ಮಟ್ಟದಲ್ಲಿ ಕಾನೂನುಗಳನ್ನು ತರಲಾಗಿದೆ. ಅದೇ ಕಾರಣಕ್ಕಾಗಿ ಶಿಕ್ಷಣವನ್ನು ಕಡ್ಡಾಯ ಮಾಡಲಾಗಿದೆ ಎಂದರು.

ಮಕ್ಕಳನ್ನು ವಿವಿಧ ಉದ್ಯಮಗಳಲ್ಲಿ ದುಡಿಸಿಕೊಳ್ಳುವುದನ್ನು ಕಾನೂನು ನಿಷೇಧಿಸಿದೆ. ಆದರೂ ಕೆಲವೊಂದು ಕಾರಣಗಳಿಗಾಗಿ ಮಕ್ಕಳನ್ನು ದುಡಿಮೆಗೆ ಕಳುಹಿಸುವ ಪ್ರಕರಣಗಳು ಕಂಡುಬರುತ್ತವೆ. ಬಡತನ ಮತ್ತು ಶಿಕ್ಷಣದ ಸೌಲಭ್ಯ ಇಲ್ಲದಿರುವುದು ಪ್ರಮುಖ ಕಾರಣಗಳಾಗಿ ಕಂಡುಬರುತ್ತವೆ. ಬಡತನ ನಿರ್ಮೂಲನೆ ಮಾಡಿದರೆ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಹಕಾರಿಯಾಗುತ್ತದೆ ಎನ್ನುವ ಕಾರಣಕ್ಕೆ ವಿವಿಧ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಆಹಾರ ಭದ್ರತೆಯೂ ಇದರಲ್ಲಿ ಸೇರಿಕೊಂಡಿದೆ. ಬಡತನ ಮತ್ತು ಆಹಾರ ಭದ್ರತೆ ಒಂದಕ್ಕೊಂದು ನಂಟು ಹೊಂದಿದ್ದು, ಶಿಕ್ಷಣದಿಂದ » 6ನೇ ಪುಟಕ್ಕೆ

## ಮಾಸಾಂತ್ಯಕ್ಕೆ ಸಂಪುಟ ವಿಸ್ತರಣೆ

**ಬೆಂಗಳೂರು**

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಚಿವ ಸಂಪುಟವನ್ನು ಕೊನೆಯ ಬಾರಿಗೆ ಭಾರೀ ಪ್ರಮಾಣದಲ್ಲಿ ಪುನರ್ ರಚಿಸಲು ನಿರ್ಧರಿಸಿದ್ದು, ಬಹುತೇಕ ಈ ಮಾಸಾಂತ್ಯದಲ್ಲಿ ಈ ಪ್ರಕ್ರಿಯೆ ನಡೆಯುವ ನಿರೀಕ್ಷೆಯಿದೆ.

ತಮ್ಮ ಸಂಪುಟದಿಂದ ಕನಿಷ್ಟ 8 ಸಚಿವರನ್ನು ಕೈ ಬಿಟ್ಟು ಹತ್ತು ಮಂದಿಯನ್ನು ಸೇರ್ಪಡೆ ಮಾಡಿಕೊಳ್ಳಲು ಉದ್ದೇಶಿಸಿದ್ದಾರೆ. ಈ ಸಂಬಂಧ ಅವರು ಎಐಸಿಸಿ ಉಪಾಧ್ಯಕ್ಷ ರಾಹುಲ್ ಗಾಂಧಿ ಅವರ ಜತೆಯೂ ಸಹ ಚರ್ಚೆ ನಡೆಸಿದ್ದು, ಅವರಿಂದ ಇದಕ್ಕೆ ಹಸಿರು ನಿಶಾನೆ ದೊರೆತಿದೆ.

ಹಾಲಿ ಸಚಿವ ಸಂಪುಟದಲ್ಲಿರುವ ಮಂತ್ರಿಗಳ ಪೈಕಿ ಯಾರ್‍ಯಾರು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸೋಲು ಅನುಭವಿಸುತ್ತಾರೆ ಎಂಬ ಕುರಿತು ಈಗಾಗಲೇ ನಡೆಯುತ್ತಿರುವ ಸರ್ವೆ ಮೂಲಕ ಸಿಎಂ ಸಿದ್ಧರಾಮಯ್ಯ ಮಾಹಿತಿ ಪಡೆದಿದ್ದಾರೆ. ಅಂತಹವರನ್ನು ಸಂಪುಟದಿಂದ ಕೈಬಿಡಲು ಉದ್ದೇಶಿಸಿದ್ದಾರೆ ಎನ್ನಲಾಗಿದೆ.

ಹಾಲಿ ಸಚಿವ ಸಂಪುಟದಲ್ಲಿರುವ ಅರ್ಧಕ್ಕೂ ಹೆಚ್ಚು ಸಚಿವರು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸೋಲು ಅನುಭವಿಸುವುದು ನಿಶ್ಚಿತ ಎಂದು ಸರ್ವೆ ನೀಡಿರುವ ವರದಿಯನ್ನು ಸಿದ್ಧರಾಮಯ್ಯ ಗಂಭೀರವಾಗಿ ಪರಿಗಣಿಸಿದ್ದಾರೆ.

ಹೀಗೆ ಸೋಲುವ ಮಂತ್ರಿಗಳ ಪೈಕಿ ಕೆಲ ಮಂತ್ರಿಗಳ ಕ್ಷೇತ್ರದಲ್ಲಿನ ವಿರೋಧಿ ಅಲೆಯನ್ನು ಸರಿಪಡಿಸಿದರೆ ಅವರು ಗೆಲ್ಲಬಹುದು. ಆದರೆ ಕನಿಷ್ಠ ಎಂಟು ಮಂದಿ ಮಂತ್ರಿಗಳು ಸೋಲು ಅನುಭವಿಸುವುದು ನಿಶ್ಚಿತ ಎಂದು ಮುಖ್ಯಮಂತ್ರಿಗಳಿಗೆ ಸಲ್ಲಿಕೆಯಾದ ಪ್ರಾಥಮಿಕ ವರದಿ ಹೇಳಿದೆ.

ಒಂದು ಹಂತದಲ್ಲಿ ಸಚಿವ ಸಂಪುಟದಲ್ಲಿ ಖಾಲಿ ಇರುವ ಮಂತ್ರಿ ಸ್ಥಾನಗಳನ್ನು ಭರ್ತಿ ಮಾಡುವುದಷ್ಟಕ್ಕೇ ಗಮನ ಹರಿಸಲು ಸಿದ್ಧರಾಮಯ್ಯ ನಿರ್ಧರಿಸಿದ್ದರಾದರೂ ಸರ್ವೆ ವರದಿಯಲ್ಲಿ ಸೋಲು ಅನುಭವಿಸುವ ಮಂತ್ರಿಗಳ ಕುರಿತು ಸ್ಪಷ್ಟವಾಗಿ ಹೇಳಿದ ಮೇಲೆ ಸಂಪುಟ ಪುನರ್‌ರಚನೆ ಮಾಡುವುದು ಅನಿವಾರ್ಯ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಸೋಲುವ ಮಂತ್ರಿಗಳು ಯಾರು? ಯಾವ ಕಾರಣಕ್ಕಾಗಿ ಅವರು ಸೋಲುತ್ತಾರೆ? ಯಾವ್ಯಾವ ಅಂಶಗಳು ಅವರ ಸೋಲಿಗೆ ಕಾರಣವಾಗುತ್ತವೆ? ಸೋಲುವ ಪರಿಸ್ಥಿತಿ ಇದ್ದರೂ ತಪ್ಪುಗಳನ್ನು ಸರಿಪಡಿಸಿಕೊಂಡು ಗೆಲ್ಲುವ » 10ನೇ ಪುಟಕ್ಕೆ

## ಅಧಿವೇಶನ ಜೂನ್ 21ರವರೆಗೆ ವಿಸ್ತರಣೆ

**ಬೆಂಗಳೂರು**

ಎಐಸಿಸಿ ಉಪಾಧ್ಯಕ್ಷ ರಾಹುಲ್‌ಗಾಂಧಿ ಬೆಂಗಳೂರಿಗೆ ಭೇಟಿ ನೀಡಿದ್ದ ಹಿನ್ನೆಲೆಯಲ್ಲಿ ವಿಧಾನಮಂಡಲ ಅಧಿವೇಶನವನ್ನು ದಿನದ ಮಟ್ಟಿಗೆ ಹಠಾತ್ ಮುಂದೂಡಲಾಗಿದ್ದು, ಅಧಿವೇಶನವನ್ನು ಜೂನ್ 21 ರವರೆಗೆ ವಿಸ್ತರಿಸಲು ನಿರ್ಧರಿಸಲಾಗಿದೆ.

ರಾಹುಲ್ ಗಾಂಧಿ ಭೇಟಿ ಕಾರಣ ಬಹುತೇಕ ಸಚಿವರು ಹಾಗೂ ಶಾಸಕರು ಅಧಿವೇಶನಕ್ಕೆ ಹಾಜರಾಗಿರಲಿಲ್ಲ. ಹೀಗಾಗಿ ವಿಧಾನಮಂಡಲ ಅಧಿವೇಶನವನ್ನು ಜೂನ್ ಇಪ್ಪತ್ತೊಂದರವರೆಗೆ ವಿಸ್ತರಿಸಲು ನಿರ್ಧರಿಸಲಾಗಿದ್ದು ವಿಧಾನಸಭೆ ಕಲಾಪವನ್ನು ವಿಸ್ತರಿಸುವ ಕುರಿತು ಸಭಾಧ್ಯಕ್ಷ ಕೆ.ಬಿ.ಕೋಳಿವಾಡ್ ಅಧಿಕೃತವಾಗಿ ಘೋಷಿಸಿದರು.

ಇದೇ ಪರಿಸ್ಥಿತಿ ಮೇಲ್ಮನೆಯಲ್ಲೂ ಸಹ ನಡೆಯಿತು. ಅಲ್ಲಿನ ಕಲಾಪವನ್ನು ಸಹ ಮುಂದೂಡಲಾಯಿತು.

ಬಜೆಟ್ ಮಂಡನೆಯ ನಂತರ ಪಡೆದ ಲೇಖಾನುದಾನದ ಹಿನ್ನೆಲೆಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನ ಬಜೆಟ್‌ಗೆ ಪೂರ್ಣ ಪ್ರಮಾಣದ ಒಪ್ಪಿಗೆ ಪಡೆಯಲಿದೆ.

ಇದೇ ಉದ್ದೇಶಕ್ಕಾಗಿ ನಡೆಯುತ್ತಿರುವ ವಿಧಾನ ಮಂಡಲ ಅಧಿವೇಶನವನ್ನು ಜೂನ್ 16 ರವರೆಗೆ ನಡೆಸಲು ಹಿಂದೆ ತೀರ್ಮಾನ ಮಾಡಲಾಗಿತ್ತು.

ಆದರೆ ಇದೀಗ ಬಜೆಟ್ ಮೇಲೆ ಪೂರ್ಣ ಪ್ರಮಾಣದ ಒಪ್ಪಿಗೆ ಪಡೆಯಲು ನಡೆಯಬೇಕಾದ ಚರ್ಚೆ ವಿಸ್ತೃತವಾಗಿ ನಡೆಯಬೇಕು ಎಂದು ತೀರ್ಮಾನಿಸಲಾಗಿದ್ದು, ಇದುವರೆಗೆ ಆ ಕುರಿತು ನಡೆದಿರುವ ಚರ್ಚೆ ಕಡಿಮೆ. ಹೀಗಾಗಿ ಅಧಿವೇಶನವನ್ನು ವಿಸ್ತರಿಸಲು ನಿರ್ಧರಿಸಲಾಗಿದೆ.

ಮಂಗಳವಾರದಿಂದ ಮಧ್ಯಾಹ್ನದ ನಂತರ ವಿವಿಧ ಇಲಾಖೆಗಳ ಮೇಲಿನ ಚರ್ಚೆಗೆ ಪೂರ್ಣ » 10ನೇ ಪುಟಕ್ಕೆ

## ಫೈನಾನ್ಸ್‌ನಲ್ಲಿ ವಂಚನೆ ಪ್ರಕರಣ
## 13 ಮಂದಿಗೆ ಶಿಕ್ಷೆ ಪ್ರಕಟ

**ತುಮಕೂರು**

ತುಮಕೂರಿನಲ್ಲಿ ಠೇವಣಿ ಹಣ ಸಂಗ್ರಹಿಸಿ ಫೈನಾನ್ಸ್ ವ್ಯವಹಾರ ಮಾಡುತ್ತಿದ್ದ ಮಂಜುನಾಥ ಫೈನಾನ್ಸ್ ವ್ಯವಸ್ಥಾಪಕ ನಿರ್ದೇಶಕ ಸೇರಿ ಫೈನಾನ್ಸ್‌ನ ಸಿಇಒ ಹಾಗೂ ನಿರ್ದೇಶಕರನ್ನೊಳಗೊಂಡಂತೆ 13 ಮಂದಿಗೆ ಇಲ್ಲಿನ ಪ್ರಧಾನ ಜಿಲ್ಲಾ ಹಾಗೂ ಸತ್ರನ್ಯಾಯಾಲಯವು ಶಿಕ್ಷೆ ಹಾಗೂ ದಂಡ ಪ್ರಕಟಿಸಿದೆ.

ನಗರದ ಚಿಕ್ಕಪೇಟೆಯಲ್ಲಿ ಫೈನಾನ್ಸ್ ವ್ಯವಹಾರ ನಡೆಸುತ್ತಿದ್ದ ಮಂಜುನಾಥ ಫೈನಾನ್ಸ್ ಸಾವಿರಾರು ಮಂದಿಯಿಂದ ಠೇವಣಿ ಹಣ ಸಂಗ್ರಹಿಸಿತ್ತು. ಕ್ರಮೇಣ ತನ್ನ ಗ್ರಾಹಕರಿಗೆ ಹಣ ನೀಡುವಲ್ಲಿ ವಂಚಿಸಿದೆ ಎಂಬ ಆರೋಪಗಳು ಕೇಳಿಬಂದವು. ಸುಮಾರು 64 ಲಕ್ಷ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿತ್ತು. ಕಳೆದ ಸುಮಾರು 8 ವರ್ಷಗಳಿಂದ ಈ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿತ್ತು. ಕಳೆದ ಜೂನ್ 7 ರಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯವು 13 ಮಂದಿಗೆ ಶಿಕ್ಷೆ ವಿಧಿಸಿ ಶಿಕ್ಷೆಯ ಪ್ರಮಾಣವನ್ನು ಜೂನ್ 12 ಕ್ಕೆ ಮುಂದೂಡಿತ್ತು.

ಸೋಮವಾರ ನ್ಯಾಯಾಲಯದಲ್ಲಿ ಶಿಕ್ಷೆ ಪ್ರಕಟಿಸಿದ ನ್ಯಾಯಾಧೀಶರು 13 ಜನರಿಗೆ ಶಿಕ್ಷೆ ಹಾಗೂ ದಂಡ ವಿಧಿಸಿದ್ದಾರೆ. ಇವರಲ್ಲಿ ಕೆಲವರಿಗೆ 7 ವರ್ಷಗಳವರೆಗೆ ಶಿಕ್ಷೆ ಮತ್ತು 25 ಸಾವಿರ ರೂ. ದಂಡ, ಮತ್ತೆ ಕೆಲವರಿಗೆ 5 ವರ್ಷ ಶಿಕ್ಷೆ ಪ್ರಕಟಿಸಲಾಗಿದೆ. 82 ವರ್ಷದ ಮಹಿಳೆಯೊಬ್ಬರಿಗೆ 40 ಸಾವಿರ ರೂ. ದಂಡ ವಿಧಿಸಲಾಗಿದೆ. ಒಟ್ಟು 20 ಜನ ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದರು. 7 ಜನ ಬಿಡುಗಡೆಗೊಂಡಿದ್ದಾರೆ. ಪಾಲುದಾರಿಕೆ ಅನ್ವಯ ಟಿ.ಎಚ್.ಮಂಜುನಾಥ್ ಮ್ಯಾನೇಜಿಂಗ್ » 10ನೇ ಪುಟಕ್ಕೆ

### ವಿ.ವಿ.ವಿಚಾರ ಸಂಕಿರಣದಲ್ಲಿ ವಿಜ್ಞಾನಿ ರಾಘವೇಂದ್ರರಾವ್ ಪ್ರತಿಪಾದನೆ
## ಔಷಧೀಯ ಸಸ್ಯಗಳು ದೇಶದ ಆರ್ಥಿಕ ಸಂಪತ್ತಾಗಬೇಕು

**ತುಮಕೂರು**

ನಮ್ಮ ದೇಶದಲ್ಲಿ ಹೇರಳವಾಗಿ ಲಭ್ಯವಿರುವ ಔಷಧೀಯ ಸಸ್ಯಗಳು ನಮ್ಮ ದೇಶದ ಆರ್ಥಿಕ ಸಂಪತ್ತಾಗಿ ಪರಿವರ್ತನೆ ಆಗಬೇಕು ಎಂದು ಬೆಂಗಳೂರಿನ ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ (ಐ.ಎನ್.ಎಸ್.ಎ.) ಯ ಗೌರವ ವಿಜ್ಞಾನಿ ಡಾ.ಆರ್.ರಾಘವೇಂದ್ರರಾವ್ ಅವರು ಬಲವಾಗಿ ಪ್ರತಿಪಾದಿಸಿದರು.

ಅವರು ಸೋಮವಾರ ಬೆಳಗ್ಗೆ ತುಮಕೂರು ನಗರದ ತುಮಕೂರು ವಿಶ್ವವಿದ್ಯಾನಿಲಯದ ಸರ್‌ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ವಿ.ವಿ.ಯ ಸಸ್ಯಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಹಾಗೂ ಶ್ರೀದೇವಿ ಸ್ನಾತಕೋತ್ತರ ಕೇಂದ್ರದ ಬಯೋಟೆಕ್ನಾಲಜಿ ವಿಭಾಗದ ಸಂಯುಕ್ತಾಶ್ರಯದಲ್ಲಿ ಏರ್ಪಟ್ಟಿರುವ ''ಔಷಧೀಯ ಮತ್ತು ಸುಗಂಧಿತ ಸಸ್ಯಗಳು ಕುರಿತ ಎರಡು ದಿನಗಳ ಅವಧಿಯ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸಮ್ಮೇಳನ ಪ್ರಕ್ರಿಯೆಯ ಹೊತ್ತಿಗೆಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು.

> **ಆಂಜನೇಯ ಹಿಮಾಲಯದಿಂದ ಸಂಜೀವಿನಿ ಪರ್ವತವನ್ನೇ ಲಂಕೆಗೆ ಹೊತ್ತು ತಂದ. ಹಾಗೆ ತರುವಾಗ ಆ ಪರ್ವತದ ಚೂರುಗಳು ಭೂಮಿಯ ಮೇಲೆ ಅಲ್ಲಲ್ಲಿ ಬಿದ್ದು, ಅಂತಹ ಸ್ಥಳಗಳೆಲ್ಲ ಔಷಧೀಯ ಸಸ್ಯಗಳಿಂದ ಪ್ರಸಿದ್ಧವಾಗಿವೆ. ಅವುಗಳಲ್ಲಿ ತುಮಕೂರು ಜಿಲ್ಲೆಯ ಸಿದ್ಧರಬೆಟ್ಟವೂ ಒಂದು ಎಂಬ ಪ್ರತೀತಿ ಇದೆ. ಚಿಕಿತ್ಸೆಯ ಬಳಿಕ ಆ ಪರ್ವತವನ್ನು ಆಂಜನೇಯ ಮರಳಿ ಹಿಮಾಲಯದಲ್ಲೇ ಇಟ್ಟು ಬಂದಿದ್ದು, ಬಳಿಕ ಅದು ಗಂಧಮರ್ಧನ ಪರ್ವತವಾಗಿ ಜನಜನಿತಗೊಂಡಿತೆಂಬ ವಿವರಣೆಯೂ ಇದೆ. ಅಂದರೆ ರಾಮಾಯಣದ ಕಾಲದಲ್ಲೇ ಜೀವ ರಕ್ಷಣೆಯ ಔಷಧೀಯ ಸಸ್ಯಗಳ ಬಗ್ಗೆ ಅರಿವು ಇತ್ತೆಂಬುದು ಗೊತ್ತಾಗುತ್ತದೆ. ಆದರೆ ಈಗ ನಮಗೆ ಆ ಸಸ್ಯದ ಲಭ್ಯತೆ ಬಗ್ಗೆ ಗೊತ್ತಿಲ್ಲ. ಒಂದು ವೇಳೆ ಜೀವ ರಕ್ಷಣೆಯ ಸಂಜೀವಿನಿ ಬಗ್ಗೆ ತಿಳಿದಲ್ಲಿ, ಅದು ಲಭಿಸಿದಲ್ಲಿ ಜಾಗತಿಕ ಮಟ್ಟದಲ್ಲಿ ಭಾರತದ ಆರ್ಥಿಕ ಸ್ಥಿತಿಯೇ ಬದಲಾಗಿಬಿಡುತ್ತದೆ.**

ಔಷಧೀಯ ಸಸ್ಯಗಳ ಬಗೆಗಿನ ಜ್ಞಾನ ಹಾಗೂ ಬಳಕೆ ನಮ್ಮ ದೇಶದಲ್ಲಿ ಪುರಾತನ ಕಾಲದಿಂದಲೂ ಚಾಲ್ತಿಯಲ್ಲಿದೆ. ವೇದಗಳು, ರಾಮಾಯಣ, ಮಹಾಭಾರತ ಮತ್ತಿತರ ಎಲ್ಲ ಪ್ರಾಚೀನ ಗ್ರಂಥಗಳಲ್ಲೂ ಇದರ ಉಲ್ಲೇಖವಿದೆ. ಆದರೆ ಈ ಜ್ಞಾನವನ್ನು ಬಳಸಿಕೊಂಡು ಆಧುನಿಕ ಸನ್ನಿವೇಶದಲ್ಲಿ ಜಾಗತಿಕ ಮಟ್ಟದಲ್ಲಿ ನಾವು ಸಾಧಿಸಿರುವ ಯಶೋಗಾಥೆ ಎಲ್ಲಿದೆ ಎಂದು ಪ್ರಶ್ನಿಸಿದರು.

**ಸಂಜೀವಿನಿ - ಸೋಮರಸ ಈಗೆಲ್ಲಿ?:** ರಾಮ-ರಾವಣರ ನಡುವಿನ ಯುದ್ಧದ ಸಂದರ್ಭದಲ್ಲಿ ಲಕ್ಷ್ಮಣ ಪ್ರಜ್ಞಾಹೀನನಾಗಿದ್ದಾಗ ಆತನ ಚಿಕಿತ್ಸೆಗೆಂದು ಆಂಜನೇಯ ಹಿಮಾಲಯದಿಂದ ಸಂಜೀವಿನಿ ಪರ್ವತವನ್ನೇ ಲಂಕೆಗೆ ಹೊತ್ತು ತಂದ. ಹಾಗೆ ತರುವಾಗ ಆ ಪರ್ವತದ ಚೂರುಗಳು ಭೂಮಿಯ ಮೇಲೆ ಅಲ್ಲಲ್ಲಿ ಬಿದ್ದು, ಅಂತಹ ಸ್ಥಳಗಳೆಲ್ಲ ಔಷಧೀಯ ಸಸ್ಯಗಳಿಂದ ಪ್ರಸಿದ್ಧವಾಗಿವೆ. ಅವುಗಳಲ್ಲಿ ತುಮಕೂರು ಜಿಲ್ಲೆಯ ಸಿದ್ಧರಬೆಟ್ಟವೂ ಒಂದು ಎಂಬ ಪ್ರತೀತಿ ಇದೆ. ಚಿಕಿತ್ಸೆಯ ಬಳಿಕ ಆ ಪರ್ವತವನ್ನು ಆಂಜನೇಯ ಮರಳಿ ಹಿಮಾಲಯದಲ್ಲೇ ಇಟ್ಟು ಬಂದಿದ್ದು, ಬಳಿಕ ಅದು ಗಂಧಮರ್ಧನ ಪರ್ವತವಾಗಿ ಜನಜನಿತಗೊಂಡಿತೆಂಬ ವಿವರಣೆಯೂ ಇದೆ. ಅಂದರೆ ರಾಮಾಯಣದ ಕಾಲದಲ್ಲೇ ಜೀವ ರಕ್ಷಣೆಯ ಔಷಧೀಯ ಸಸ್ಯಗಳ ಬಗ್ಗೆ ಅರಿವು ಇತ್ತೆಂಬುದು ಗೊತ್ತಾಗುತ್ತದೆ. ಆದರೆ ಈಗ ನಮಗೆ ಆ ಸಸ್ಯದ ಲಭ್ಯತೆ ಬಗ್ಗೆ ಗೊತ್ತಿಲ್ಲ. ಒಂದು ವೇಳೆ ಜೀವ ರಕ್ಷಣೆಯ ಸಂಜೀವಿನಿ ಬಗ್ಗೆ ತಿಳಿದಲ್ಲಿ, ಅದು ಲಭಿಸಿದಲ್ಲಿ ಜಾಗತಿಕ ಮಟ್ಟದಲ್ಲಿ ಭಾರತದ ಆರ್ಥಿಕ ಸ್ಥಿತಿಯೇ ಬದಲಾಗಿಬಿಡುತ್ತದೆ ಎಂದು ಅವರು ವಿಶ್ಲೇಷಿಸಿದರು.

ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖವಿರುವ ಸೋಮರಸದ ವಿಷಯವೂ ಹೀಗೇ ಆಗಿದೆ. ಆ ಕಾಲದ ಋಷಿಗಳೆಲ್ಲರೂ ಬುಡಕಟ್ಟಿನವರಾಗಿದ್ದರು. ಅವರೆಲ್ಲರೂ ದೈವಿಕ ಪೇಯವೆಂಬ ಭಾವನೆಯಿಂದ ಸೋಮರಸವನ್ನು ಸೇವಿಸುತ್ತಿದ್ದರೆಂಬ ಉಲ್ಲೇಖಗಳಿವೆ. ಆಧುನಿಕ » 6ನೇ ಪುಟಕ್ಕೆ

## ಕರ್ನಾಟಕ ಬಂದ್‌ಗೆ ಜಿಲ್ಲೆಯಲ್ಲಿ ನೀರಸ ಪ್ರತಿಕ್ರಿಯೆ

### ಕೆಲವು ಸಂಘಟನೆಗಳಿಂದ ಪ್ರತಿಭಟನೆ: ವಾಹನ ಸಂಚಾರ -ಜನ ಜೀವನ ಯಥಾಸ್ಥಿತಿ

**ತುಮಕೂರು**

ಬಯಲು ಸೀಮೆ ಪ್ರದೇಶಗಳಿಗೆ ಶಾಶ್ವತ ನೀರಾವರಿ ಯೋಜನೆ ಕಲ್ಪಿಸುವುದು, ರೈತರ ಸಾಲ ಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಕೆಲವು ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಬಂದ್‌ಗೆ ತುಮಕೂರು ನಗರ ಹಾಗೂ ಜಿಲ್ಲೆಯಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತ ವಾಯಿತು.

ಸಂಘಟನೆಗಳು ಬೆಳಗ್ಗೆ ಒಂದೆರಡು ಕಡೆ ಪ್ರತಿಭಟನೆ ನಡೆಸಿದವು. ಹಲವು ಸಂಘ ಟನೆಗಳು ಬಂದ್‌ನಿಂದ ದೂರ ಉಳಿದವು. ಹೀಗಾಗಿ ಪ್ರತಿಭಟನಾಕಾರರು ಕೆಲವೊತ್ತು ಘೋಷಣೆ ಕೂಗಿ ನಂತರ ನಿರ್ಗಮಿಸಿದರು. ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಂಘಟನೆಗಳ ಪ್ರಮುಖರು ಮಾತನಾಡಿದರು.

ಕರ್ನಾಟಕ ಬಂದ್ ಅಂಗವಾಗಿ ಶಾಲಾ ಕಾಲೇಜುಗಳು ಮುಚ್ಚುವವೆ ಎಂಬ ಗೊಂದಲ ಸಾರ್ವಜನಿಕ ವಲಯದಲ್ಲಿ ಮೊನ್ನೆಯಿಂದಲೇ ಹರಿದಾಡುತ್ತಿತ್ತು. ಭಾನುವಾರ ಸಂಜೆಯ ವೇಳೆಗೆ ವಿವಿಧ ಮೂಲಗಳಿಂದ ಒಂದಷ್ಟು ಮಾಹಿತಿ ಲಭ್ಯವಾಗಿ ಬಂದ್‌ಗೆ ಎಲ್ಲ ಸಂಘಟನೆಗಳೂ ಬೆಂಬಲ ವ್ಯಕ್ತಪಡಿಸಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಿ ಶಾಲಾ ಕಾಲೇಜುಗಳು ಎಂದಿನಂತೆ ನಡೆಯಬಹುದು ಎಂದು ಊಹಿಸಲಾಗಿತ್ತು. ಸೋಮವಾರ ಬೆಳಗಿನಿಂದಲೇ ಎಂದಿನಂತೆ ವಾಹನ ಸಂಚಾರ ಹಾಗೂ ಜನತೆಯ ಓಡಾಟ ಮಾಮೂಲಿನಂತಿತ್ತು. ಶಾಲಾ ಕಾಲೇಜುಗಳು ಕಾರ್ಯನಿರ್ವಹಿಸಿದವು. ಬ್ಯಾಂಕುಗಳಲ್ಲಿ ವಿಪರೀತ ಜನದಟ್ಟಣೆ ಇತ್ತು. ಶನಿವಾರ ಮತ್ತು ಭಾನುವಾರ ರಜಾ ದಿನಗಳಾಗಿದ್ದರಿಂದ ವಿವಿಧ ವಹಿವಾಟುದಾರರು ಬ್ಯಾಂಕ್‌ಗಳಲ್ಲಿ ಕ್ಯೂ ನಿಂತ ತಮ್ಮ ವ್ಯವಹಾರ ನಡೆಸುತ್ತಿದುದು ಕಂಡುಬಂತು. ಕೆ.ಎಸ್.ಆರ್.ಟಿ.ಸಿ. ಮತ್ತು ಖಾಸಗಿ ವಾಹನಗಳು ಎಂದಿನಂತೆ ಚಲಿಸಿದವು.



ವಿವಿಧ ಸಂಘಟನೆಗಳಿಂದ ನಗರದಲ್ಲಿ ಕೆಲ ಹೊತ್ತು ರಸ್ತೆ ತಡೆ ನಡೆಸಲಾಯಿತು.



ನಗರದ ಪ್ರಮುಖ ರಸ್ತೆಗಳು ಎಂದಿನಂತೆ ಜನಜಂಗುಳಿಯಿಂದ ಕೂಡಿದ್ದವು.

### ಬರ ಪರಿಹಾರ ಘೋಷಣೆಗೆ ಮನವಿ

**ಶಾಶ್ವತ ನೀರಾವರಿ ಯೋಜನೆ, ರೈತರ ಸಾಲವನ್ನು ಹಾಗೂ ರೈತರಿಗೆ ಬರ ಪರಿಹಾರ ಯೋಜನೆಗಾಗಿ ಸೋಮವಾರ ಬಂದ್ ಚರಿಸಲಾಯಿತು. ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ದಾವಣಗೆರೆ, ಚಿತ್ರದುರ್ಗ ಜಿಲ್ಲೆ ಸೇರಿದಂತೆ ಬಯಲು ಸೀಮೆ ಜಿಲ್ಲೆಗಳಲ್ಲಿ ತಲೆ ದೋರಿರುವ ನೀರಿನ ಸಮಸ್ಯೆ ನಿವಾರಣೆಗಾಗಿ ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವಂತೆ ತಿಳಿಸಲಾಗಿದೆ. ಹಾಗೆ ಚಿಕ್ಕಬಳ್ಳಾಪುರ, ಕೋಲಾರ ತುಮಕೂರು ಜಿಲ್ಲೆಗಳ ಜನರು ನೀರಾವರಿ ಯೋಜನೆಗಳಿಲ್ಲದೆ, ಅಂತರ್ಜಲ ಸಂಪತ್ತು ಇಲ್ಲದೆ ದಶಕಗಳಿಂದ ಬಳಲಿದ್ದಾರೆ. ಇದು ಕುಡಿಯುವ ನೀರಿನ ಯೋಜನೆ ಆಗಿದ್ದು ಜೊತೆಗೆ ಬೇರೆ ಬೇರೆ ಮೂಲಗಳಿಂದ ದೊರಕಬಹುದಾದ ಪರ್ಯಾಯ ನೀರಿನ ವ್ಯವಸ್ಥೆ ಹಾಗೂ ಬರ ಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿ ಕಲ್ಪಿಸುವ ಯೋಜನೆಯನ್ನು ಪೂರ್ಣಗೊಳಿಸಿ ಗಾಗೆ ಈ ಬರ ಪೀಡಿತ ಪ್ರದೇಶದಲ್ಲಿ ಬಳಲಿರುವ ರೈತರ ಸಾಲಮನ್ನಾ ಮಾಡಿ ರೈತರ ಬರ ಪರಿಹಾರ ಘೋಷಣೆಯನ್ನು ಮಾಡಬೇಕೆಂದು ಕನ್ನಡ ಸೇನೆ ಜಿಲ್ಲಾಧ್ಯಕ್ಷ ಧನಿಯಕುಮಾರ್ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.**

ಆಟೋರಿಕ್ಷಗಳೂ ಸಹ ಬಂದ್‌ಗೆ ಓಗೊಡಲಿಲ್ಲ. ಅಂತರಸನಹಳ್ಳಿ ಕೃಷಿ ಮಾರು ಕಟ್ಟೆಯಲ್ಲೂ ಸಹ ಎಂದಿನಂತೆ ವ್ಯವಹಾರ ನಡೆಸಿದರು. ನಗರದಾದ್ಯಂತ ಎಲ್ಲ ಕಡೆ ಅಂಗಡಿಗಳು ತೆರೆದಿದ್ದವು. ಗ್ರಾಮೀಣ ಪ್ರದೇಶಗಳಿಂದಲೂ ಸಹ ಜನರು ನಗರದತ್ತ ಬಂದು ಹೋಗುವುದು ಮಾಡುತ್ತಿದ್ದರು. ಇದರಿಂದಾಗಿ ಬಂದ್ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ನಗರದಲ್ಲಿ ನ್ಯಾಯಾಲಯದ ಕಾರ್ಯ ಕಲಾಪಗಳು ಸುಗಮವಾಗಿ ಸಾಗಿದವು. ಕಕ್ಷಿದಾರರು ಎಂದಿ ನಂತೆ ಕಲಾಪಗಳಲ್ಲಿ ಭಾಗವಹಿಸಿದ್ದರು. ನ್ಯಾಯವಾದಿಗಳೂ ಸಹ ಕಲಾಪದಲ್ಲಿ ಭಾಗಿಗಳಾಗಿದ್ದರು.

ಯಾವುದೇ ಸರ್ಕಾರಿ ಕಚೇರಿಗಳೂ ಸಹ ಬಾಗಿಲು ಬಂದ್ ಮಾಡಿರಲಿಲ್ಲ. ಎಲ್ಲ ಕಚೇರಿ ಗಳೂ ತೆರೆದಿದ್ದು, ಕಾರ್ಯನಿರ್ವಹಿಸು ತ್ತಿದುದು ಕಂಡು ಬಂದಿತು. ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಕಂಡುಬಂದ ಬಂದ್ ಪ್ರತಿಕ್ರಿಯೆ ತುಮಕೂರು ಜಿಲ್ಲೆ ಯಲ್ಲಿ ಕಂಡುಬರಲಿಲ್ಲ. ಮೂರು ಜಿಲ್ಲೆ ಗಳಲ್ಲಿ ಮಾತ್ರವೇ ಶಾಲಾ ಕಾಲೇಜಿಗೆ ರಜೆ ಘೋಷಿಸಲಾಗಿತ್ತು. ಉಳಿದಂತೆ ಯಾವ ಜಿಲ್ಲೆಗಳಲ್ಲಿಯೂ ರಜೆ ಘೋಷಣೆ ಮಾಡಿರಲಿಲ್ಲ.

ಕೊನೆಯ ಎರಡು ದಿನದ
ಬಾರಿ ರಿಯಾಯಿತಿ ಮಾರಾಟ
ಫರ್ನಿಚರ್ ಖರೀದಿಸಲು ಸುವರ್ಣ ಅವಕಾಶ
ತುಮಕೂರಿನಲ್ಲಿ
FURNITURE TODAY
Interior Exhibition



Date : 09-06-2017 TO 14-06-2017
KNS Mill Ground, (NEAR SBI BANK)
Kunigal Main Road, Tumkur.

